Restoration of Goragundi tank.

*Q.—633. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether any agricultural lands have been submerged on account of the restoration of Goragundi tank in Hally Mysore Hobli in Holenaarsipur Taluk ;

(*b*) if so, whether any compensation has been paid to the owners of the submerged lands ;

(*c*) if not, the reasons for the same ;

(*d*) when the said tank was restored ;

(*e*) whether any provision is made in the estimate prepared for the restoration of the said tank, for paying compensation in case there were to be any submersion ;

(*f*) whether they would take action to pay compensation to the ryots, at least now ?

*A.—Sri ALUR HANUMANTHAPPA (Deputy Minister for Minior Irrigation).—

(*a*) Yes.
(*b*) No.
(*c*) This issue is pendiug with the Revenue Department.
(*d*) 1958.
(*e*) No.
(*f*) Yes.

ಶ್ರೀ ಎಚ್. ಡಿ. ದೇವೇಗೌಡ.—ಈ ಕೆರೆಯ ಜೀರ್ಣೋದ್ಧಾರವನ್ನು 1958 ರಲ್ಲಿ ಮಾಡ ಲಾಯಿತು ಎಂದು ತಿಳಿಸಿದ್ದೀರಿ. ಮುಳುಗಡೆಯಾಗಿರುವ ಭೂಮಿಗಳ ಮಾಲೀಕರುಗಳಿಗೆ ಇದುವರೆಗೆ ಪರಿಹಾರ ಕೊಡದೇ ಇರುವುದಕ್ಕೆ ಕಂದಾಯ ಇಲಾಖೆಯಲ್ಲಿ ಅಧಿಕಾರಿಗಳು ಎಸ್ಟಿಮೇಟು ಮಾಡ ತಕ್ಕಂಥ ಕಾಲದಲ್ಲಿ careless and indifferent ಆಗಿ ಎಸ್ಟಿಮೇಟು ಮಾಡಿದಂಥ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ವಿಚಾರವನ್ನು ಸಂಪೂರ್ಣವಾಗಿ ಒಪ್ಪುವುದಕ್ಕಾಗುವುದಿಲ್ಲ. ಭೂಮಿ ಆಕ್ವಾಯರ್ ಮಾಡತಕ್ಕ ಕಾಲದಲ್ಲಿ ಕೆಲವು ಫಾರ್ಮಾಲಿಟೀಸ್ ಅನುಸರಿಸಬೇಕಾಗುತ್ತದೆ. ಅದಕ್ಕಾಗಿ ಸ್ವಲ್ಪ ತಡವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇದುವರೆಗೆ ಕಾಂಪೆನ್‌ಸೇಷನ್ ಕೊಡದೇ ಇರುವುದಕ್ಕೆ ಕಾರಣ ವೇನು ?

ಶ್ರೀ ಆಲೂರು ಹನುಮಂತಪ್ಪ.—ಇದರಲ್ಲಿ ನಾಲ್ಕು ಎಕರೆ ಭೂಮಿ ಮಾತ್ರ ಮುಳುಗಡೆಯಾಗು ತ್ತದೆ. ಅವಾರ್ಡ್ ಸ್ಟೇಜ್‌ಗೆ ಬಂದಿದೆ. ಇನ್ನು ತಡವಾಗುವುದಕ್ಕೆ ಕಾರಣವಿಲ್ಲ.

ಶ್ರೀ ಟಿ. ಎಸ್. ಮಾದಪ್ಪಗೌಡ.—ಪರಿಹಾರ ಕೊಡುವುದಕ್ಕೆ ಎಂಟು ವರ್ಷ ತಡವಾಗಿದೆ. ಈ ಪರಿಹಾರ ಹಣಕ್ಕೆ ಬಡ್ಡಿ ಸೇರಿಸಿ ಮತ್ತು ಈ ಅವಧಿಯಲ್ಲಿ ಬೆಳೆ ಬಂದಿದ್ದರೆ ಎಷ್ಟು ಉತ್ಪತ್ತಿಯಾಗು ತ್ತಿತ್ತೋ ಅಷ್ಟು ಹಣವನ್ನು ಕೂಡಿಸಿ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಹಿಂದೆ ಪರಿಹಾರ ಹಣ 64 ಸಾವಿರ ರೂಪಾಯಿ ಎಂದು ಇದ್ದುದನ್ನು ಈಗ ಹತ್ತು ಸಾವಿರ ರೂಪಾಯಿ ಎಂದು ಅಂದಾಜು ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈತರ ವಿಷಯದಲ್ಲಿ ಅಧಿಕಾರಿಗಳಿಗೆ ಪ್ರೇಮದ ಮನೋ ಭಾವನೆ ಇಲ್ಲದೇ ಇರುವುದರಿಂದ ಎಂಟು ವರ್ಷ ತಡವಾಗಿದೆ. Lethargic ಮತ್ತು indifferent ಆಗಿ ಇರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಎರ್ಲಾ ಸಂದರ್ಭಗಳಲ್ಲಿ ಅಧಿಕಾರಿಗಳೇ ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ.

Sri C. J. MUCKANNAPPA.—What we want to know is: why this lethargy on the part of officers to see that the money is not given to the man who has got his land submerged? What is the reason?

ಶ್ರೀ ಆಲೂರು ಹನುಮಂತಪ್ಪ.—ಸಂಪೂರ್ಣವಾಗಿ ಅಧಿಕಾರಿಗಳ ಅಲಸ್ಯ ಮತ್ತು ಇನ್‌ಡಿಫರೆಂಟ್ ಆಗಿರುವುದು ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ. ಆಕ್ವಿಸಿಶನ್ ಇದ್ದಲ್ಲಿ ಸ್ವಲ್ಪ ತಡವಾಗುತ್ತದೆ. ಈಗ ಈ ಕಾರ್ಯ ಮುಗಿಯುತ್ತಾ ಬಂದಿದೆ.

ಶ್ರೀ ಜಿ. ವೆಂಕಟೇಗೌಡ.—ಈ ವಿಷಯದಲ್ಲಿ ಯಾವುದೇ ತಕರಾರುಗಳಿಲ್ಲ, ಪ್ಲಾನ್ ಮತ್ತು ಅಂದಾಜುಗಳನ್ನು ಮಾಡಿದಾಗ ಈ ಜಮೀನುಗಳು ಮುಳುಗಡೆಯಾಗುತ್ತವೆ ಎಂದು ತಿಳಿಯಲಿಲ್ಲವೆ, ಅಕ್ವೈರ್ ಮಾಡಿಕೊಳ್ಳಲು ಪ್ರೊಸೀಡಿಂಗ್ಸ್ ಪ್ರಾರಂಭವಾಗಲಿಲ್ಲವೇ, ಎಂಟು ವರ್ಷಗಳಾದರೂ ಏಕೆ ನಿಧಾನವಾಗಿದೆ ಎನ್ನುವುದಕ್ಕೆ ಕಾರಣಗಳನ್ನು ತಿಳಿಸುತ್ತಾರೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ನಿಧಾನವಾಗಿರುವುದಕ್ಕೆ ಕಾರಣವನ್ನು ಹೇಳಿದ್ದೇನೆ. ಆದಷ್ಟು ಬೇಗ ಕಾಂಪೆನ್‌ಸೇಷನ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹತ್ತು ಸಾವಿರ ರೂಪಾಯಿ ಕಾಂಪೆನ್‌ಸೇಷನ್ ಕೊಡತಕ್ಕ ವಿಷಯದಲ್ಲಿ ಬೇರೆ ಅಂದಾಜು ತಯಾರಾಗಿದೆ ಎಂದು ಹೇಳಿದರು. ಮೊದಲು ತಯಾರಾಗಿದ್ದ ಅಂದಾಜಿನಲ್ಲಿ ಕಾಂಪೆನ್‌ಸೇಷನ್‌ಗೋಸ್ಕರವಾಗಿ ಹಣ ಮಂಜೂರಾಗಿರಲಿಲ್ಲವೇ ? ಈ ಜಮೀನನ್ನು ಕಳೆದುಕೊಂಡಿರುವವರು 12 ಜನ ಸಂಸಾರವನ್ನು ಹೊಂದಿದ್ದು ಅವರಿಗೆ ಬೇರೆ ಜಮೀನಿಲ್ಲದೆ ಅವರು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುವುದೆಂದು ರಾಷ್ಟ್ರಾಧ್ಯಕ್ಷರಿಗೂ ಅರ್ಜಿಯನ್ನು ಬರೆದು ಈ ಸರ್ಕಾರಕ್ಕೂ ಅರ್ಜಿಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ನಮಗೆ ಅರ್ಜಿ ಬಂದಿರುವುದು ನನಗೆ ಗೊತ್ತಿಲ್ಲ. ಆದಷ್ಟು ಬೇಗ, ಕೆಲವಾರು ದಿವಸಗಳಲ್ಲಿ ಪರಿಹಾರವನ್ನುಕೊಟ್ಟು ಈ ಪ್ರಶ್ನೆ ಬಗೆಹರಿಯುವಂತೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಸದಸ್ಯರು ಅನೇಕ ಅರ್ಜಿ ಬರೆದಿದ್ದಾರೆ, ಪಾರ್ಟಿಯೂ ಬರೆದಿದ್ದಾನೆ ಎಂದು ಹೇಳಿದರು. ಅವರು ಬರೆದಿರುವುದನ್ನು ಓದಿ ಅದನ್ನು ಸಂಬಂಧಪಟ್ಟವರಿಗೆ ಕಳುಹಿಸುತ್ತಾರೆಯೇ ಅಥವಾ ಹಾಗೆಯೇ ರುಜು ಮಾಡಿ ಕಳುಹಿಸುತ್ತಾರೆಯೇ ?

ಉಪಾಧ್ಯಕ್ಷರು.—ಅರ್ಜಿ ಬಂದಿಲ್ಲ ಎಂದು ಹೇಳಿದರು.

ಶ್ರೀ ಜಿ. ರಾಮೇಗೌಡ.—ಎಲ್ಲ ನಿಯಮಗಳನ್ನೂ ಅನುಸರಿಸಿ ಇಷ್ಟು ದಿನವಾದರೂ ಪರಿಹಾರವನ್ನು ಕೊಡದೆ ಇರತಕ್ಕ ದುರದೃಷ್ಟಕರ ಪರಿಸ್ಥಿತಿಯನ್ನು ಹೋಗರಾಡಿಸಲು ಇನ್ನು ಒಂದು ತಿಂಗಳೊಳಗಾಗಿ ಹಣವನ್ನು ಪಾವತಿ ಮಾಡುವಂಥ ಭರವಸೆಯನ್ನು ಕೊಡುತ್ತಾರೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಸರ್ವ ಪ್ರಯತ್ನ ಮಾಡಿ ಆದಷ್ಟು ಬೇಗ ಹಣವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕಾಂಪೆನ್‌ಸೇಷನ್ ಹಣ ರೈತರಿಗೆ ಸಿಕ್ಕದೆ ಇರುವುದಕ್ಕೆ ಅವಾರ್ಡ್ ಆಗಿರುವ ಹಣದಲ್ಲಿ ಸ್ವಲ್ಪ ಭಾಗವನ್ನು ಕೊಡಬೇಕೆಂದು ಅಧಿಕಾರಿಗಳು ಕೇಳುತ್ತಾರೆ. ಅದನ್ನು ಕೊಡದೆ ಇರುವುದರಿಂದ ಅನೇಕ ರೈತರಿಗೆ ಹಣ ಸಿಕ್ಕುತ್ತಿಲ್ಲ. ಇದು ಸರ್ಕಾರದ ಗಮನಕ್ಕೆ ಏನಾದರೂ ಬಂದಿದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಯಾವುದಾದರೂ ನಿದರ್ಶನಗಳಿದ್ದು, ಹೇಳಿದರೆ ಅವರ ಮೇರೆ ಕ್ರಮ ತೆಗೆದುಕೊಳ್ಳುತ್ತೇವೆ.

Mr. DEPUTY SPEAKER.—Next question No. 344 of Sri G. T. Rangappa is postponed, and it will be taken up some other day.

Question No. 582 of Sri Kenchappa is also postponed.

Question No. 582, 595 and No. 648 are also postponed, as the Hon'ble Education Minister has intimated that he is not able to be present.

Next question No. 446 of Sri B. V. Magavi. As the Hon'ble Member is absent it lapses.

Sri C. J. MUCKANNAPPA.—You have postponed all these questions. Suppose a member is absent, automatically his questions lapse. In the Lok Sabha, recently, there was on observation made by the Hon'ble Speaker of the Lok Sabha. When a Minister is absent as it is a joint responsibility, the other Ministers must reply. What is the indication now ? Is he laid up.....

[Mr. Speaker in the Chair]

The questions to be answered by the Hon'ble Education Minister have been postponed by the Hon'ble Deputy Speaker. I want to know whether the Hon'ble Minister is laid up with any ailment or whether he has gone out of station ? Is there any indication to the Speaker that he is out of Station on some urgent work than the legislature work ?

Mr. SPEAKER.—I am sorry, I made a mistake. I must apologise. I instructed the Deputy Speaker to say that the interpellations standing in the name of the Minister for Education might be adjourned. I did not tell him any further. I received a letter which says that the Hon'ble Minister is unwell. Further the Deputy Minister for Education is also unwell and is convalescing. He is not out of station but unwell. Whenever they write, we never question. We must have that amount of mutual confidence and responsibility.

Completion of Irrigation wells in Magadi Taluk.

*Q.—533. Sri C. R. RANGE GOWDA (Magadi).—

Will the Minister for Revenue be pleased to state :—

(*a*) whether it is a fact that two hundred and two (202) Irrigation wells remain incomplete, for past many years, for not giving any balance of grant promised to them, in Magadi Taluk ;

(*b*) whether any amount is sanctioned now for the completion of those wells ;

(*c*) if so, how much ;

(*d*) whether they would take suitable steps to get those wells completed before the rainy season ?

A.—Sri M. V. KRISHNAPPA (Minister for Revenue).—

(*a*) No.

(*b*) Yes.

(*c*) Rs. 1,12,000.

(*d*) Yes.

ಶ್ರೀ ಸಿ. ಆರ್. ರಂಗೇಗೌಡ.—(ಎ) ಭಾಗಕ್ಕೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಎಷ್ಟು ಬಾವಿಗಳು ಪೂರ್ತಿಯಾಗಿಲ್ಲ ಎನ್ನುವುದರ ಬಗ್ಗೆ ಸರ್ಕಾರದವರಲ್ಲಿ ಮಾಹಿತಿ ಇದೆಯೇ ?